
ಅಂದುಕೊಂಡು, ತನ್ನಲ್ಲೂ ಬೇರೆಯವರ ಕಷ್ಟದಲ್ಲಾಗುವ ಉದಾರಗುಣವಿದೆಯಲ್ಲ ಅನ್ನುವುದು ಹೊಳೆದು ಗೆಲುವಾದರು. ಮರುಕ್ಷಣ, ಹಾಗೆ ಮಾಡಿದರೆ ಮರುದಿನದಿಂದ ತಾನು ಪೇಟೆಗೆ ಹೋಗುವ ಉದ್ದೇಶಕ್ಕೇ ಒಂದು ಕತೆಯನ್ನಾರೋಪಿಸಿ ಬಸ್ಸು ಹತ್ತದಂತಾಗಲೂಬಹುದು ಅನಿಸಿ ಕುಳಿತಲ್ಲೆ ಕುಸಿದರು. ಬಸ್ಸು ಇಕ್ಕಟ್ಟಲ್ಲಿ ಬಲಕ್ಕೆ ಮತ್ತೆ ತಿರುಗಿಕೊಂಡು ಪೋಸ್ಟಾಫೀಸೆದುರು ಸಾಗಿ ಸ್ಟ್ಯಾಂಡಿಗೆ ಬಂದು ಸೇರಲು ಕಾಲುಗಂಟೆಯೆ ಹಿಡಿಯಿತು. ಮೇಲೆ ಕೆಳಗೆ ಸೀಟಡಿಯಲ್ಲೆಲ್ಲ ಇಟ್ಟ ಚೀಲಗಳನ್ನೆಳೆದುಕೊಳ್ಳುತ್ತ ಇಳಿಯುವ ಕೆಲಸವನ್ನು ಹೋರಾಟವನ್ನಾಗಿ ಭಾವಿಸಿಕೊಂಡ ಜನ ಬಾಗಿಲತ್ತ ನುಗ್ಗಿದರು. ‘ಥೊ! ಎಂತಾ ರಶ್ಶು; ಸುಸ್ತಾಗೋಯ್ತು. ಒಂದು ಚಾ ಹಾಕದಿದ್ರೆ ನಡೆಯೋದಿಲ್ಲ!’ ಅಂತ ತಮಗೆ ತಾವೇ ಕಾರಣ ಕೊಟ್ಟುಕೊಳ್ಳುತ್ತ ಮಾದೇವಶೆಟ್ರ ಬಸ್‌ಸ್ಟ್ಯಾಂಡಿನ ಕ್ಯಾಂಟೀನಿನತ್ತ ಧಾವಿಸಿದರು. ಸೊಸೈಟಿಗೆ ಹೋಗುವ ಕೆಲಸವಿದ್ದ ಶಂಕರ ಮತ್ತೆ ಮೂಲೆಮನೆ ಜಗನ್ನಾಥ ಪರಿಚಯದ ಗುಟ್ಕಾದಂಗಡಿಯವನಿಗೆ ಎರಡು ತುಳಸಿ ಕೊಡು ಅಂದರು.

ನಟರಾಜ ರಸ್ತೆಯಲ್ಲಿ ಜನರನ್ನು ಗುದ್ದಿಕೊಂಡೆ ನುಗ್ಗುವ ರಿಕ್ಷಾ, ಮೋಟರುಸೈಕಲ್ಲುಗಳಿಂದ ಬಚಾವಾಗುತ್ತ ಫಾರೆಸ್ಟರ್ ಅಂಗಡಿ, ಆಯುರ್ವೇದ ಪಂಡಿತರಂಗಡಿ, ಹೆಗಡೆ ಟೀ ಡಿಪೋದಲ್ಲಿ ಹತ್ತತ್ತು ನಿಮಿಷ ವಾಡಿಕೆಯಂತೆ ನಿತ್ತು ಮಾತಾಡಿಸಿ ದೇವೀಕೆರೆ ಸರ್ಕಲ್ಲಿಗೆ ಬರುತ್ತಿದ್ದಂತೆ ತಂಪಾಗಿ ಏನಾದರೂ ಕುಡಿಯುವ ಅನಿಸಿದ್ದಕ್ಕೆ ಅಂಗಡಿಗೆ ಹೋಗಿ ಅಂಗಡಿಯವ ಮೂಸಂಬಿ ಸೊಳೆಗಳನ್ನು ಬಿಡಿಸಿ ಮಿಕ್ಸರಿಗೆ ತುಂಬುವುದನ್ನು ನೋಡುತ್ತ ಕುಳಿತರು.

ಎರಡೂ ಹಸ್ತಗಳಲ್ಲಿ ಗ್ಲಾಸು ಹಿಡಿದು ಅಂಗೈಯಲ್ಲೂ ನಾಲಗೆಯಲ್ಲೂ ಒಳಗಿನ ರಸದ ತಂಪನ್ನನುಭವಿಸುತ್ತಿದ್ದರು. ‘ನಮಸ್ಕಾರ ವಡೇರಿಗೆ, ಅದೇ ನೋಡ್ತೆ!’ ಸ್ವರ ಬಂದತ್ತ ತಿರುಗಿದವರಿಗೆ ಹಿಂದೆ, ಶುದ್ಧ ಕುಡಿಯುವನೀರು ಅಂತ ಬರೆದಲ್ಲಿ ನಿತ್ತವ ತನ್ನತ್ತಲೇ ಮಾತಾಡಿಸುವಂತೆ ನಗೆ ಬೀರಿದಾಗ ಯಾರು ಅಂತ ಕಣ್ಣು ಕಿರಿದಾಗಿಸಿಕೊಂಡು ಯೋಚನೆಗೆ ಬಿದ್ದರು. ಚೂಪನೆ ಮೂಗು... ತಾಮ್ರದ ಬಣ್ಣ... ಕೆಳದುಟಿಯಡಿ ಗಲ್ಲದ ಭಾಗದಲ್ಲಷ್ಟೆ ಚುಬುರು ಗಡ್ಡ. ತಲೆಮೇಲೆ ಮಾಸಲಾದ ರೋಮಮಯ ಟೊಪ್ಪಿ. ಮಣ್ಣರಾಶಿಯಿಂದ ಛೇದಿಸಿಕೊಂಡೇಳುವ ಮೊಳಕೆಯಂತೆ... ನೆನಪು ಮಿಳಿದುಕೊಳ್ಳುತ್ತ... ನೋಡಿದಾಂಗೇ ಕಾಣತದಲ್ಲ... ಗೊತ್ತಿದ್ದ ಮನುಷ್ಯನೆ ಅನಿಸುತ್ತ, ‘ಅರೇ! ಇಕ್ಬಾಲು ಅಲ್ವನೋ? ಎಷ್ಟು ದಿನಾ ಆಯ್ತೋ ಮಾರಾಯ ನೋಡಿ!’ ಅಂದರು ನಗುವರಳಿಸುತ್ತ. ಆತ ಕುಡಿಯುತ್ತಿದ್ದ ನೀರಿನ ಗ್ಲಾಸುಸಮೇತ ಇತ್ತ ಬರುತ್ತ, ‘ನಾನು ಅಕ್ರಾಂ ಒಡೆರೆ, ಇಕ್ಬಾಲ್ ನನ್ನ ಅಪ್ಪನಾಯ್ತು. ಆಗ ಸಣ್ಣಕಿದ್ದೆ ನಿಮ್ಗೆ ಮರ್ತದೆ. ಅಬ್ಬು ಜತೆ ಬರ್ತಿದ್ದೆ ನಿಮ್ದು ಮನೆಗೆ. ನಿಮ್ಮನಿಯಿಂದೇ ಎರಡ್ಹೊತ್ತು ನೀರು ತಗಳದಾಗಿತ್ತು. ನೀವೇ ಕೊಟ್ಟಿದ್ರಿ ಎಷ್ಟೋ ಸರ್ತಿ...’ ಅಂದವ, ‘...ವಯಸ್ಸು ಆಗದೆ ನಿಮ್ಗೆ ಬಿಟ್ರೆ ಅದೇತರ ಕಾಣ್ತೇರಿ. ಮರ್ತಿದೀರಿ; ನಾನು ಗುರ್ತು ಹಿಡದೆ ನೋಡಿ’ ಅಂದ ಖುಷಿಯಲ್ಲಿ.



ದೊಡ್ಡತೇರು ಮತ್ತೆ ಹೂವಿನತೇರು ಎರಡಕ್ಕೂ ಮೂರು ಗೋಡೆ ಮೇಲೆ ಚಾವಣಿ ಹಾಕಿ, ಮುಂಭಾಗ ಪೂರ್ತಿ ತೆರೆದಿರುವಂತ ಎತ್ತರದ ತೇರುಮನೆ ಕಟ್ಟಿದ್ದರು ಯಾವುದೋ ಕಾಲದಲ್ಲಿ. ರಥೋತ್ಸವ ಮುಗಿದನಂತರ ಬೃಹದಾಕಾರದ ತೇರುಗಳನ್ನು ಆ ಮನೆಗಳಲ್ಲಿ ಸೇರಿಸಿಬಿಡುತ್ತಿದ್ದರು. ಈ ತುದಿಯಲ್ಲಿ ತೇರುಮನೆ; ಆ ತುದಿಯಲ್ಲಿ ಗಿರಣಿಮನೆ. ನಡುವೆ ಉದ್ದಕೆ ಹರಿದ ರಥಬೀದಿ. ವಿಶೇಷದಿನ ಬಿಟ್ಟರೆ ಖಾಲಿ ಹೊಡೆಯುವ ಬೀದಿಯ